# All India Radio: Bangalore
## National Bulletin In Kannada
## 31.08.2025  1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

1. ಎಸ್‌ಸಿಒ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ - ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ
2. ಸ್ವದೇಶಿ ಪರಿಕಲ್ಪನೆ ದೇಶದ ಅಭಿವೃದ್ಧಿಗೆ ನಿರ್ಣಾಯಕ - ಮನದ ಮಾತಿನಲ್ಲಿ ಪ್ರಧಾನಿ
3. ಯುಪಿಎಸ್‌ಸಿ ಆಕಾಂಕ್ಷಿಗಳಿಗೆ ಉದ್ಯೋಗಾವಕಾಶ ನೀಡುವಲ್ಲಿ ಪ್ರತಿಭಾ ಸೇತು ಪೂರಕ - ಪ್ರಧಾನಿ ಅಭಿಮತ
4. ಪುರುಷರ ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್: ಇಂದು ಭಾರತ-ಜಪಾನ್ ಹಣಾಹಣಿ

<><><><>

ಶಾಂಘೈ ಸಹಕಾರ ಸಂಘಟನೆ ಎಸ್‌ಸಿಒ ಶೃಂಗಸಭೆಯ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಚೀನಾದ ಟಿಯಾಂಜಿಬನ್ ನಲ್ಲಿಂದು ಬೆಳಿಗ್ಗೆ ಅಲ್ಲಿನ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು. ಅದೇ ರೀತಿ ಶಾಂಘೈ ಸಹಕಾರ ಸಂಘದ ಇತರ ಸದಸ್ಯ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಅಂತೆಯೇ ಪ್ರಧಾನಿಯವರು ಇಂದು ರಾತ್ರಿ ಅಲ್ಲಿನ ಸರ್ಕಾರ ಆಯೋಜಿಸುವ ಔತಣಕೂಟದಲ್ಲೂ ಭಾಗವಹಿಸಲಿದ್ದಾರೆ. ಇಡೀ ವಿಶ್ವಕ್ಕೆ ಸವಾಲಾಗಿರುವ ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ಉಗ್ರವಾದದಂತಹ ಮೂರು ಪಿಡುಗುಗಳನ್ನು ನಿಯಂತ್ರಿಸುವುದು ಈ ಶಾಂಘೈ ಸಹಕಾರ ಸಂಘದ ಮುಖ್ಯ ಉದ್ದೇಶವಾಗಿದೆ. ಭಾರತವು ೨೦೧೭ರಿಂದ ಶಾಂಘೈ ಸಹಕಾರ ಸಂಘದ  ಸದಸ್ಯ ರಾಷ್ಟ್ರವಾಗಿದೆ. ೨೦೨೨-೨೩ ರಲ್ಲಿ ಎಸ್‌ಸಿಒದ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿತ್ತು. ಎಸ್‌ಸಿಒ ೧೦ ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ. ಭಾರತ ಸೇರಿದಂತೆ, ಬೆಲಾರಸ್, ಚೀನಾ, ಇರಾನ್, ಕಝುಕ್ ಸ್ತಾನ್, ಕಿರ್ಗಿಸ್ತಾನ್, ಪಾಕಿಸ್ತಾನ್, ರಷ್ಯಾ, ತಜಕಿಸ್ತಾನ್ ಹಾಗೂ ಉಜ್ಬೇಕಿಸ್ತಾನ್ ಒಳಗೊಂಡಿವೆ.

<><><><>

'ವೋಕಲ್ ಫಾರ್ ಲೋಕಲ್", 'ಆತ್ಮನಿರ್ಭರ್ ಭಾರತ್" ಮತ್ತು "ವಿಕಸಿತ ಭಾರತದ ಗುರಿಯನ್ನು ಮುಂದಿಟ್ಟುಕೊಂಡು ಭಾರತ, ಪ್ರಗತಿಪಥದಲ್ಲಿ ಸಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆಕಾಶವಾಣಿಯ ಜನಪ್ರಿಯ ಮನ ಕಿ ಬಾತ್ ಕಾರ್ಯಕ್ರಮದ ೧೨೫ನೇ ಆವೃತ್ತಿಯಲ್ಲಿ ಸಮಸ್ತ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಮೊದಲಿಗೆ ದೇಶ ಎದುರಿಸುತ್ತಿರುವ ನೈಸರ್ಗಿಕ ವಿಪತ್ತುಗಳ ಕುರಿತು ಪ್ರಸ್ತಾಪಿಸಿದರು. ಈ ಮಳೆಯ ಋತುವಿನಲ್ಲಿ ಎದುರಾಗಿರುವ ನೈಸರ್ಗಿಕ ವಿಪತ್ತುಗಳು ದೇಶಕ್ಕೆ ಸವಾಲಾಗಿ ಪರಿಣಮಿಸಿವೆ. ಕಳೆದ ಕೆಲವು ವಾರಗಳಲ್ಲಿ ಭಾರೀ ಮಳೆ, ನೆರೆ ಮತ್ತು ಭೂಕುಸಿತದಿಂದ ದೇಶದ ಹಲವೆಡೆ ವಿಪತ್ತು ಉಂಟಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳ ನೋವು ನಮ್ಮೆಲ್ಲರ ನೋವು ಎಂದು ಪ್ರಧಾನಿ ನುಡಿದರು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತಿತರ ಭದ್ರತಾ ಪಡೆಗಳು ನಿರಂತರ ಶ್ರಮಿಸಿ ಅಪಾಯದಿಂದ ಜನರನ್ನು ರಕ್ಷಿಸಿದ್ದಾರೆ. ತಂತ್ರಜ್ಞಾನವನ್ನು ಸಹ ಬಳಸಿ, ಥರ್ಮಲ್ ಕ್ಯಾಮೆರಾ, ಲೈಫ್ ಡಿಟೆಕ್ಟರ್, ಸ್ನಿಫರ್ ನಾಯಿ, ಡ್ರೋನ್ ನಿಗಾವಣೆ ಮುಂತಾದವುಗಳಿಂದ ನೆರವು ಕಾರ್ಯ ತ್ವರಿತಗೊಳಿಸಲಾಗಿದೆ. ಸ್ಥಳೀಯ ನಾಗರಿಕರು, ಸಮಾಜ ಸೇವಕರು, ವೈದ್ಯರು ಮತ್ತು ಆಡಳಿತ ವ್ಯವಸ್ಥೆಯೂ ತ್ವರಿತ ಪ್ರತಿಕ್ರಿಯೆ ನೀಡಿದೆ ಎಂದ ಪ್ರಧಾನಿ, ಎಲ್ಲರಿಗೂ ಧನ್ಯವಾದ ತಿಳಿಸಿದ್ದಾರೆ. ಬಳಿಕ ಪ್ರಧಾನಿ, ಪ್ರತಿಭಾ ಸೇತು ಎಂಬ ಡಿಜಿಟಲ್ ವೇದಿಕೆ ಬಗ್ಗೆ ಉಲ್ಲೇಖಿಸಿದರು. ಇದು ಯುಪಿಎಸ್‌ಸಿ ಪರೀಕ್ಷೆಗಳ ಎಲ್ಲ ಹಂತಗಳಲ್ಲಿ ಉತ್ತೀರ್ಣರಾದ ಆದರೆ, ಅಂತಿಮ ಪಟ್ಟಿಗೆ ಆಯ್ಕೆಯಾಗದ ಅಭ್ಯರ್ಥಿಗಳ ಮಾಹಿತಿಯನ್ನು ಸಂಗ್ರಹಿಸುತ್ತದೆ. ಖಾಸಗಿ ಕಂಪನಿಗಳು ಈ ಪೋರ್ಟಲ್ ಮೂಲಕ

ಅವರ ಬಗ್ಗೆ ತಿಳಿದುಕೊಂಡು ಉದ್ಯೋಗ ನೀಡಬಹುದಾಗಿದೆ. ಈಗಾಗಲೇ ಈ ಮೂಲಕ ನೂರಾರು ಅಭ್ಯರ್ಥಿಗಳಿಗೆ ಉದ್ಯೋಗ ಸಿಕ್ಕಿದೆ ಎಂದು ಅವರು ಹರ್ಷ ವ್ಯಕ್ತ ಪಡಿಸಿದರು.

ಹಬ್ಬಗಳ ಋತುವಿನಲ್ಲಿ ದೇಶದ ಪ್ರಜೆಗಳು ಸ್ವದೇಶಿ ಭಾವನೆಯನ್ನು ಎಂದೂ ಮರೆಯಬಾರದು ಎಂದ ಅವರು, ಉಪಹಾರಗಳು ಭಾರತದಲ್ಲಿ ತಯಾರಾಗಿರಬೇಕು, ಉಡುಪುಗಳು ಭಾರತದಲ್ಲಿ ನೇಯ್ದಿರಬೇಕು, ಭಾರತದ ಉತ್ಪನ್ನಗಳಿಂದಲೇ ಅಲಂಕರಿಸಬೇಕು. ಎಲ್ಲವೂ ಸ್ವದೇಶಿ ಆಗಿರಬೇಕು ಈ ಸಂತೋಷದ ಹೊತ್ತಿನಲ್ಲಿ ಶುಚಿತ್ವಕ್ಕೂ ಮಹತ್ವ ನೀಡಬೇಕು, ಸ್ವಚ್ಛತೆ ಇರುವಲ್ಲಿ ಹಬ್ಬದ ಸಂತೋಷದ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ ಎಂದರು. ರಾಷ್ಟ್ರದ ಏಕತೆ ರಾಷ್ಟ್ರದ ಅಭಿವೃದ್ಧಿಗೆ ಅತಿ ಅಗತ್ಯ ಎಂದ ಅವರು, ಏಕ ಭಾರತ-ಶ್ರೇಷ್ಠ ಭಾರತ ಪರಿಕಲ್ಪನೆಯಡಿ ಕ್ರೀಡೆ ಮಹತ್ವದ ಪಾತ್ರವಹಿಸುತ್ತಿದೆ ಎಂದು ಹೇಳಿದರು. ಜಮ್ಮು ಮತ್ತು ಕಾಶ್ಮೀರದ ದಾಲ್ ಸರೋವರದಲ್ಲಿ ನಡೆದ ಮೊಟ್ಟಮೊದಲ ಖೇಲೋ ಇಂಡಿಯಾ ಜಲ ಕ್ರೀಡೋತ್ಸವ ನಡೆಯಿತು, ಇದರಲ್ಲಿ ೮೦೦ ಕ್ರೀಡಾಪಟುಗಳು ಭಾಗವಹಿಸಿದ್ದರು ಎಂದು ತಿಳಿಸಿದರು. ಇದೇ ಕ್ರೀಡಾ ಕೂಟದಲ್ಲಿ ತಮ್ಮ ತಮ್ಮ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದ ಒಡಿಶಾದ ರಶ್ಮಿತಾ ಸಾಹು ಮತ್ತು ಶ್ರೀನಗರದ ಮೋಹ್ಸಿನ್ ಅಲಿ ಜೊತೆ ಪ್ರಧಾನಿ ಸಂವಾದ ನಡೆಸಿದರು. ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾದಲ್ಲಿ ನಡೆದ ಮೊದಲ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯದ ವೇಳೆ ಸಾವಿರಾರು ಯುವಕರು ಜಮಾಯಿಸಿದ್ದ ದೃಶ್ಯ ಸ್ಮರಣೀಯವಾಗಿತ್ತು. ಈ ಘಟನೆ ರಾಯಲ್ ಪ್ರೀಮಿಯರ್ ಲೀಗ್‌ನಲ್ಲಿ ನಡೆದಿದೆ ಎಂದರು. ಪಾಡ್ ಕಾಸ್ಟ್‌ನಂತಹ ಸಂವಾದ ಕಾರ್ಯಕ್ರಮಗಳು ಹೆಚ್ಚು ಜನರನ್ನು ತಲುಪುವ ಕುರಿತು ಮಾತನಾಡಿದ ಪ್ರಧಾನಿ, ಲೆಕ್ಸ್ ಫ್ರೀಡ್ಮನ್ ಅವರೊಂದಿಗಿನ ಪಾಡ್‌ಕ್ಯಾಸ್ಟ್‌ನಲ್ಲಿ ಶಹಡೋಲ್‌ನ ಯುವ ಫುಟ್ಬಾಲ್ ಆಟಗಾರರ ಕುರಿತು ಮಾತನಾಡಿದ್ದನ್ನು ಉಲ್ಲೇಖಿಸಿದರು. ಈ ಪಾಡ್‌ಕ್ಯಾಸ್ಟ್ ಆಲಿಸಿದ ಜರ್ಮನಿಯ ಫುಟ್ಬಾಲ್ ಆಟಗಾರ ಮತ್ತು ತರಬೇತುದಾರ ಡೈಟ್ಮಾರ್ ಬೈಯರ್ಸ್‌ಡಾರ್ಫರ್ ಅವರು, ಶಹಡೋಲ್‌ನ ಯುವ ಫುಟ್ಬಾಲ್ ಆಟಗಾರರ ಜೀವನಗಾಥೆಯಿಂದ ಪ್ರೇರಣೆ ಪಡೆದು, ಕೆಲವು ಶಹಡೋಲ್ ಆಟಗಾರರಿಗೆ ಜರ್ಮನಿಯ ಅಕಾಡೆಮಿಯಲ್ಲಿ ತರಬೇತಿ ನೀಡಲು ಉತ್ಸುಕತೆ ತೋರಿದ್ದಾರೆ ಎಂಬ ವಿಶೇಷ ಮಾಹಿತಿ ಹಂಚಿಕೊಂಡರು. ಬಳಿಕ ಪ್ರಧಾನಿ, ಹುತಾತ್ಮ ಸೈನಿಕರ ಮಾಹಿತಿಯನ್ನು ನಿಷ್ಠೆಯಿಂದ ಸಂಗ್ರಹಿಸುತ್ತಿದ್ದ ಸೂರತ್‌ನ ಜೀತೇಂದ್ರ ಸಿಂಗ್ ರಠೋಡ್, ಸೌರ ಪಂಪ್ ಬಳಸಿ ೪೦ ಎಕರೆ ಪ್ರದೇಶಕ್ಕೆ ನೀರಾವರಿ ನೀಡುತ್ತಿರುವ ಬಿಹಾರದ ಮುಜಾಫರ್‌ಪುರದ ದೇವಕಿ ಅವರ ಕುರಿತು ಮನದ ಮಾತಿನಲ್ಲಿ ಪ್ರಸ್ತಾಪಿಸಿ ಶ್ಲಾಘನೆ ವ್ಯಕ್ತ ಪಡಿಸಿದರು.

<><><><>

ಮುಂದಿನ ತಿಂಗಳು ದೇಶವು ಹೈದರಾಬಾದ್ ವಿಮೋಚನಾ ದಿನವನ್ನು ಆಚರಿಸಲಿದೆ ಎಂದು ಪ್ರಸ್ತಾಪಿಸಿದ ಅವರು, ಅಪರೇಷನ್ ಪೊಲೋದಲ್ಲಿ ಪಾಲ್ಗೊಂಡ ವೀರರ ಸಾಹಸ ಸದಾ ಸ್ಮರಣೀಯ ಎಂದರು. ಇದಕ್ಕೂ ಮುನ್ನ ಅವರು, ೧೯೪೮ರ ಉಕ್ಕಿನ ಮನುಷ್ಯ ಸರ್ಧಾರ್ ವಲ್ಲಭಭಾಯಿ ಪಟೇಲ್ ಅವರ ಧ್ವನಿಮುದ್ರಣ, ಕೇಳುಗರೊಂದಿಗೆ ಹಂಚಿಕೊಂಡರು. ಆಗಿನ ಸಮಯದಲ್ಲಿ ನಿಜಾಮ ಮತ್ತು ರಜಾಕಾರ್‌ಗಳ ದೌರ್ಜನ್ಯ ಹೆಚ್ಚಾಗಿತ್ತು. ತ್ರಿವರ್ಣ ಧ್ವಜ ಹಾರಿಸಿದರೆ ಅಥವಾ ವಂದೇ ಮಾತರಂ ಘೋಷಣೆ ಕೂಗಿದರೆ ಜನರನ್ನು ಹತ್ಯೆ ಮಾಡಲಾಗುತ್ತಿತ್ತು. ಈ ಸಂದರ್ಭ ಸರ್ದಾರ್ ಪಟೇಲ್ ಅವರು 'ಆಪರೇಷನ್ ಪೊಲೋ' ಮೂಲಕ ಹೈದರಾಬಾದ್‌ನನ್ನು ಭಾರತದೊಂದಿಗೆ ಏಕೀಕೃತಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದ್ದರು ಎಂದು ಪ್ರಧಾನಿ ಸ್ಮರಿಸಿದರು. ಸೆಪ್ಟೆಂಬರ್ ೧೫ ಭಾರತದ ಮಹಾನ್ ಎಂಜಿನಿಯರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರ ಜನ್ಮದಿನ. ಈ ದಿನವನ್ನು ಅಭಿಯಂತರರ ದಿನ ಎಂದು ಆಚರಿಸಲಾಗುತ್ತದೆ. ಎಂಜಿನಿಯರ್‌ಗಳು ಯಂತ್ರಗಳನ್ನು ಮಾತ್ರ ಸೃಷ್ಟಿಸುವುದಿಲ್ಲ, ಅವರು ಕನಸುಗಳನ್ನು ನಿಜವಾಗಿಸುವ ಕರ್ಮಯೋಗಿಗಳು ಎಂದು ಪ್ರಧಾನಿ ಬಣ್ಣಿಸಿದರು.

ಸೆಪ್ಟೆಂಬರ್ ೧೭ರ ವಿಶ್ವಕರ್ಮಾ ಜಯಂತಿಯನ್ನು ಮನದ ಮಾತಿನಲ್ಲಿ ಪ್ರಸ್ತಾಪಿಸಿದ ಪ್ರಧಾನಿ, ಈ ದಿನ ಭಾರತೀಯ ಕುಶಲಕರ್ಮಿಗಳನ್ನು ಸ್ಮರಿಸುವ ದಿನ. ಅವರು ಶತಮಾನಗಳಿಂದ ತಾವು ಹೊಂದಿರುವ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ವಿಶ್ವಕರ್ಮಾ ಯೋಜನೆ ರೂಪಿಸಿದೆ ಎಂದು ಪ್ರಧಾನಿ ಮನದ ಮಾತಿನಲ್ಲಿ ತಿಳಿಸಿದರು.

<><><><>

ನವದೆಹಲಿಯಲ್ಲಿ ನಡೆದ ಸೈಕ್ಲಿಂಗ್ ಮೂಲಕ ಆರೋಗ್ಯಕರ ಜೀವನ ಮತ್ತು ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸುವ ರಾಷ್ಟ್ರವ್ಯಾಪಿ ಉಪಕ್ರಮವಾದ 'ಫಿಟ್ ಇಂಡಿಯಾ - ಸಂಡೇಸ್ ಆನ್ ಸೈಕಲ್' ನ ವಿಶೇ? ರಾಷ್ಟ್ರೀಯ ಕ್ರೀಡಾ ದಿನದ ಆವೃತ್ತಿಯಲ್ಲಿ ಕೇಂದ್ರ ಸಚಿವ ಮನ್ಸುಖ್ ಮಾಂಡವಿಯಾ ಭಾಗವಹಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ಫಿಟ್ ಇಂಡಿಯಾ ಉಪಕ್ರಮದ ಭಾಗವಾದ ಈ ಕಾರ್ಯಕ್ರಮ ದೇಶಾದ್ಯಂತ ಹೆಚ್ಚಿನ ಭಾಗವಹಿಸುವಿಕೆಗೆ ಸಾಕ್ಷಿಯಾಗಿದೆ. ಕಾರ್ಯಕ್ರಮದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವ ಮಾಂಡವಿಯಾ, 'ರಾಷ್ಟ್ರೀಯ ಕ್ರೀಡಾ ದಿನದ ಸಂದರ್ಭದಲ್ಲಿ, ಮೂರು ದಿನಗಳ ರಾಷ್ಟ್ರೀಯ ಕ್ರೀಡಾ ಉತ್ಸವವನ್ನು ಆಚರಿಸಲಾಗುತ್ತಿದೆ.

<><><><>

ಬಿಹಾರದ ರಾಜ್‌ಗಿರ್ ಅಂತಾರಾಷ್ಟ್ರೀಯ ಕ್ರೀಡಾ ಸಂಕೀರ್ಣದಲ್ಲಿಂದು ನಡೆಯಲಿರುವ ಪುರುಷರ ೨೦೨೫ರ ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತೀಯ ತಂಡವು ಜಪಾನ್ ತಂಡವನ್ನೆದುರಿಸಲಿದೆ. ಪಂದ್ಯವು ಮಧ್ಯಾಹ್ನ ೩ ಗಂಟೆಗೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>